ಪರಿಣಾಮಕಾರಿಯಾಗಿ ಸಿನಿಮಾ ಮಾರುಕಟ್ಟೆಗೆ ತರಬೇಕಿದೆ. ಆಗ ನಮಗೆ ನಯನತಾರಾ ರೀತಿಯ ಗಟ್ಟಿ ನಾಯಕಿಯೊಬ್ಬರು ಸಿಗಬಹುದು. ನಮ್ಮ ಕನ್ನಡ ಸಿನಿಮಾರಂಗಕ್ಕೆ ಒಬ್ಬ ನಯನತಾರಾ ಬೇಕಾಗಿದ್ದಾರೆ'' ಎಂದು ಶ್ರುತಿ ಹೇಳುತ್ತಾರೆ.

ಶ್ರುತಿ ಹರಿಹರನ್ ತಮ್ಮ ವೃತ್ತಿಜೀವನದ ಉತ್ತುಂಗದ ದಿನಗಳಲ್ಲಿ ಮಹಿಳಾ ಅಸ್ಮಿತೆಯ ಸಿನಿಮಾಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತಿದ್ದರು. 'ಮೀ ಟೂ' ಪ್ರಕರಣಗಳ ನಂತರ ಅವರು ಇದ್ದಕ್ಕಿದ್ದಂತೆ ಬೇಡಿಕೆ ಕಳೆದುಕೊಂಡರು. ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ''ವಿವಾದದ ಕಾರಣ ಒಂದಷ್ಟು ಸಮಯ ಚಿತ್ರರಂಗದಿಂದ ದೂರವುಳಿಯಬೇಕಾಯಿತು. ಏನೇ ನಡೆದರೂ ಎಲ್ಲದಕ್ಕೂ ಒಂದು ಕಾರಣ ಇರುತ್ತದೆ. ಕಳೆದ ದಿನಗಳ ಬಗ್ಗೆ ನನಗೆ ಯಾವುದೇ ಪಶ್ಚಾತ್ತಾಪ ಇಲ್ಲ. ಮೀ ಟೂ ಪ್ರಭಾವ ಮುಂದಿನ ದಿನಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಬೇರೆ ಬೇರೆ ರೂಪದಲ್ಲಿ ಕಾಣುತ್ತದೆ'' ಎಂದರು.

''ಎಂಥ ಸವಾಲಿನ ಪಾತ್ರವಾದರೂ ಅದನ್ನು ನಿರ್ವಹಿಸಲು ಕನ್ನಡದಲ್ಲಿ ಪ್ರತಿಭಾವಂತ ನಟಿಯರು ತಯಾರಿದ್ದಾರೆ. ಆದರೆ ಬರವಣಿಗೆಯಿಂದ ಆ ಪರಿಸ್ಥಿತಿ ಸೃಷ್ಟಿಸಿಕೊಳ್ಳಬೇಕಿದೆ. ಎಷ್ಟು ಪ್ರಯತ್ನ ಪಡುತ್ತೇವೋ ಎಲ್ಲಾದರೂ ಫಲ ಸಿಗುತ್ತದೆ. ನಾಯಕಿಯರ ಮೇಲೂ ಹಣ ಹಾಕುವವರು ಬೇಕು'' ಎನ್ನುವುದು ಅವರ ಅನಿಸಿಕೆ. ಪ್ರಸ್ತುತ 'ಸ್ಟ್ರಾಬೆರಿ', 'ಸಾರಾಂಶ' ಎನ್ನುವ ಚಿತ್ರಗಳಲ್ಲಿ ಅವರು ಕಾಣಿಸಿಕೊಳ್ಳುತ್ತಿದ್ದು, ಎರಡು ಶಾರ್ಟ್ ಫಿಲಂಗಳಲ್ಲೂ ನಟಿಸುತ್ತಿದ್ದಾರೆ. 'ಇವೆಲ್ಲವೂ ಮಹಿಳಾ ಪ್ರಧಾನ ಕಥೆಗಳನ್ನು ಹೊಂದಿದ್ದು, ಹೆಮ್ಮೆಯಿಂದ ನೋಡಬಹುದಾದ ಸಿನಿಮಾಗಳು' ಎಂದು ಶ್ರುತಿ ಹೇಳುತ್ತಾರೆ.

### ಈಗ ಕಥೆಗಳೇ ಹೀರೊ

'ಕನ್ನಡ ಸಿನಿಮಾರಂಗದಲ್ಲಿ ಮಹಿಳೆಯ ಸುತ್ತಲೇ ಕಥೆ ಹೆಣೆದಿರುವ ಮಹಿಳಾ ಪ್ರಧಾನ ಚಿತ್ರಗಳು ಹಾಗೂ ಹೀರೋಯಿನ್ ಓರಿಯೆಂಟೆಡ್ ಸಿನಿಮಾಗಳಿಗೆ ಸಂಬಂಧಿಸಿದಂತೆ ಪ್ರಯತ್ನಗಳು ನಡೆಯುತ್ತಿವೆ' ಎನ್ನುವುದು ನಟಿ ಸಂಯುಕ್ತಾ ಹೊರನಾಡು ಅವರ ಮಾತು.

''ಕೆಲವು ವರ್ಷಗಳ ಹಿಂದೆ ಹೀರೊ ಜೊತೆಯಾಗಿ ಮಾತ್ರ ನಟಿಯರು ಗುರುತಿಸಿಕೊಳ್ಳುತ್ತಿದ್ದರು. ಆದರೆ ಈಗ ಆ ಕಾಲ ಸರಿದಿದೆ. ಹಲವು ವಿಷಯಗಳಲ್ಲಿ ಮಹಿಳೆಯರು ಬದಲಾಗಿದ್ದಾರೆ. ಅವರದ್ದೇ ಆದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುತ್ತಾರೆ.



ಬ್ಯೂಟಿಫುಲ್ ಮನಸುಗಳು ಚಿತ್ರದಲ್ಲಿ ಶ್ರುತಿ ಹರಿಹರನ್. ಈಗ ಕನ್ನಡ ಚಿತ್ರರಂಗಕ್ಕೆ ಬೇಕಿರುವುದು ಇಂಥ ಬ್ಯೂಟಿಫುಲ್ ಮನಸುಗಳು.



ಗುಲಾಬಿಯ ಸಂಕಟವನ್ನು ದೇಶದ ಸಂಕಟವನ್ನಾಗಿಸಿದ 'ಗುಲಾಬಿ ಟಾಕೀಸ್'ನಂಥ ಚಿತ್ರ ಹಾಗೂ ಗುಲಾಬಿ ಪಾತ್ರದ ಅಭಿನೇತ್ರಿ ಉಮಾಶ್ರೀ ಯಾವುದೇ ಭಾಷೆಗೆ ಗೌರವ.